## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 395 (449) |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 30 /01/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಆರ್.ಪಿ.ಎಲ್ ತರಬೇತಿಯನ್ನು ನಡೆಸುತ್ತಿದ್ದು, ಸದರಿ ತರಬೇತಿಯನ್ನು ಮಾನದಂಡಗಳಿಗೆ ಅನುಗುಣವಾಗಿ ಸರಿಯಾಗಿ ನಿರ್ವಹಿಸದೆ, ಕಾರ್ಮಿಕರಿಗೆ ನೈಜವಾಗಿ ಸಿಗಬೇಕಾದ ತರಬೇತಿಯನ್ನು ಸಹ ನೀಡದೆ ಮಂಡಳಿಗೆ ಹಾಗೂ ಕಾರ್ಮಿಕರಿಗೆ ವಂಚಿಸುತ್ತಿರುವುದಾಗಿ ಜಿಲ್ಲೆಯಾದ್ಯಂತ ಹಲವು ಕಾರ್ಮಿಕರಿಂದ ದೂರುಗಳು ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಕಾರ್ಮಿಕರಿಗೆ ವೃತ್ತಿ ತರಬೇತಿಯನ್ನು ಒದಗಿಸುವ ಆರ್.ಪಿ.ಎಲ್ ತರಬೇತಿ ಯೋಜನೆ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನಿಯಮಾನುಸಾರ ನಡೆಯದೇ ಇರುವ ಬಗ್ಗೆ ದಿನಾಂಕ:19-01-2026ರಂದು ದೂರು ಸ್ವೀಕೃತಗೊಂಡಿರುತ್ತದೆ. |
| ಆ) | ಅದೇ ರೀತಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಒದಗಿಸುವ ಪ್ರಿವೆಂಟಿವ್ ಹೆಲ್ತ್ ಕೇರ್ ಚೆಕ್‌ಅಪ್ ಯೋಜನೆಯಲ್ಲಿಯೂ ಕೂಡ ಕಾರ್ಮಿಕರಿಗೆ ಸರಿಯಾದ ತಪಾಸಣೆ ನಡೆಸದಿರುವುದು | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಟ್ಟಡ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಒದಗಿಸುವ ಪ್ರಿವೆಂಟಿವ್ ಹೆಲ್ತ್ ಕೇರ್ ಚೆಕ್‌ಅಪ್ ಯೋಜನೆ ಸರಿಯಾಗಿ ನಡೆಯದೇ ಇರುವ ಬಗ್ಗೆ ಮತ್ತು ತಪಾಸಣೆ ಮಾಡಿದ ನಂತರ ತಪಾಸಣೆಯ ವರದಿಯನ್ನು ಕಾರ್ಮಿಕರಿಗೆ ನೀಡದಿರುವುದು ಹಾಗೂ ಕಾರ್ಮಿಕರು ಕೆಲವೊಂದು ಖಾಯಿಲೆಗಳಿಂದ ಬಳಲುತ್ತಿದ್ದರೂ ಸದರಿ ತಪಾಸಣೆಯ ವರದಿಗಳಲ್ಲಿ |

| | | |
|---|---|---|
| | ಹಾಗೂ ತಪಾಸಣೆ ಮಾಡಿದ ನಂತರ ತಪಾಸಣೆಯ ವರದಿಯನ್ನು ಕಾರ್ಮಿಕರಿಗೆ ನೀಡದಿರುವುದು ಹಾಗೂ ಕಾರ್ಮಿಕರು ಕೆಲವೊಂದು ಖಾಯಿಲೆಗಳಿಂದ ಬಳಲುತ್ತಿದ್ದರೂ ಸದರಿ ತಪಾಸಣೆಯ ವರದಿಗಳಲ್ಲಿ ಆರೋಗ್ಯದ ಬಗ್ಗೆ ಯಾವುದೇ ಉಲ್ಲೇಖ ಮಾಡದಿರುವುದರ ಬಗ್ಗೆ ಹಲವಾರು ಕಾರ್ಮಿಕರಿಂದ ಸತತವಾಗಿ ದೂರುಗಳು ಕೇಳಿ ಬಂದಿದ್ದು, ಈ ಕುರಿತು ಸರ್ಕಾರ ವಹಿಸಿರುವ ಕ್ರಮಗಳೇನು; | ಆರೋಗ್ಯದ ಬಗ್ಗೆ ಯಾವುದೇ ಉಲ್ಲೇಖ ಮಾಡದಿರುವುದರ ಬಗ್ಗೆ ದಿನಾಂಕ:19-01-2026ರಂದು ದೂರು ಸ್ವೀಕೃತಗೊಂಡಿರುತ್ತದೆ.<br><br>ಮಂಡಳಿಯಲ್ಲಿ ಪ್ರಿವೆಂಟಿವ್ ಹೆಲ್ತ್ ಕೇರ್ ಯೋಜನೆಯನ್ನು ಅನುಷ್ಠಾನ ಮಾಡಲು ಇ-ಟೆಂಡರ್ ಮೂಲಕ ಉಪವಿಭಾಗವಾರು ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಸದರಿ ಸಂಸ್ಥೆಯು ಕ್ಷೇತ್ರಮಟ್ಟದಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಯೋಜನೆಯ ಬಗ್ಗೆ ಅರಿವು ಮೂಡಿಸಿ ನಿಗದಿತ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಆ ಸಂದರ್ಭದಲ್ಲಿ ಫಲಾನುಭವಿಗಳ ದೂರವಾಣಿ ಸಂಖ್ಯೆಯನ್ನು ಪಡೆದು ವೈದ್ಯಕೀಯ ವರದಿಗಳನ್ನು ವಾಟ್ಸ್ ಅಪ್ ಇದ್ದವರಿಗೆ ನೇರವಾಗಿ ವಾಟ್ಸ್ ಅಪ್ ಮೂಲಕ ಕಳುಹಿಸಿಕೊಡಲಾಗುತ್ತದೆ. ತದನಂತರ, ಎಲ್ಲಾ ಫಲಾನುಭವಿಗಳಿಗೆ ವೈದ್ಯಕೀಯ ವರದಿಗಳ ಹಾರ್ಡ್ ಪ್ರತಿಗಳನ್ನು ಖುದ್ದಾಗಿ ವೈದ್ಯರ ಸಮ್ಮುಖದಲ್ಲಿ ನೀಡಲಾಗುತ್ತದೆ. ಅದರ ಯಥಾ ಪ್ರತಿಯನ್ನು ಕ್ಯೂಆರ್ ಕೋಡ್ ಒಳಗೊಂಡ ಪುಸ್ತಕಗಳನ್ನು ಕೇಂದ್ರ ಕಛೇರಿಗೂ ಸಹ ನೀಡಿರುತ್ತಾರೆ. ಕಾರ್ಮಿಕರಿಗೆ ತಪಾಸಣಾ ವರದಿಯನ್ನು ನೀಡಿರುವ ಬಗ್ಗೆ ಕ್ಷೇತ್ರಮಟ್ಟದ ಕಾರ್ಮಿಕ ಅಧಿಕಾರಿಗಳು ದೃಢೀಕರಿಸಿರುತ್ತಾರೆ. ತಪಾಸಣೆಯ ವರದಿಯನ್ನು ಕಾರ್ಮಿಕರಿಗೆ ನೀಡದಿರುವುದು ಹಾಗೂ ಕಾರ್ಮಿಕರು ಕೆಲವೊಂದು ಖಾಯಿಲೆಗಳಿಂದ ಬಳಲುತ್ತಿದ್ದರೂ ಸದರಿ ತಪಾಸಣೆಯ ವರದಿಗಳಲ್ಲಿ ಆರೋಗ್ಯದ ಬಗ್ಗೆ ಯಾವುದೇ ಉಲ್ಲೇಖ ಮಾಡದಿರುವುದರ ಬಗ್ಗೆ ಪ್ರಕರಣಗಳು ವರದಿಯಾಗಿರುವುದಿಲ್ಲ.<br>ಮುಂದುವರೆದು, ಆರ್.ಪಿ.ಎಲ್ ತರಬೇತಿ ಯೋಜನೆಯನ್ನು ಪಾರದರ್ಶಕವಾಗಿ ಅನುಷ್ಠಾನ ಮಾಡಲಾಗುತ್ತಿದೆ. ಟೆಂಡರ್ ಮೂಲಕ ಆಯ್ಕೆಯಾದ ಸಂಸ್ಥೆಗೆ ಮಂಡಳಿಯಿಂದ ತರಬೇತಿ ಪಡೆಯಬೇಕಾದ ಫಲಾನುಭವಿಗಳ ಹೆಸರು ಮತ್ತು ವಿಳಾಸವನ್ನು ಒಳಗೊಂಡ ಪಟ್ಟಿಯನ್ನು ತಂತ್ರಾಂಶದಲ್ಲಿ ಒದಗಿಸಲಾಗುತ್ತದೆ. ಇಂತಹ ಫಲಾನುಭವಿಗಳ ತಂಡವನ್ನು ರಚಿಸಿ ಅವರಿಗೆ 10 ದಿನದ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯ ದೈನಂದಿನ ಹಾಜರಾತಿಯ ವಿವರಗಳನ್ನು ತಂತ್ರಾಂಶದಲ್ಲಿ ಅಪ್‌ಡೇಟ್ ಮಾಡಲಾಗುತ್ತದೆ.<br>ತರಬೇತಿಯ ನಂತರ ನೇರವಾಗಿ ಫಲಾನುಭವಿಯ ಬ್ಯಾಂಕ್ ಖಾತೆಗೆ ಕೂಲಿ ನಷ್ಟದ ಮೊತ್ತವನ್ನು ಸಂಸ್ಥೆಯಿಂದ ಪಾವತಿಸಲಾಗುತ್ತದೆ ಹಾಗೂ ತರಬೇತಿಯ ಪ್ರಮಾಣ ಪತ್ರ ಹಾಗೂ ಕಿಟ್‌ನ್ನು ಕೂಡ ನೀಡಲಾಗುತ್ತದೆ.<br>ಈ ಸಂಪೂರ್ಣ ಪ್ರಕಿಯೆಯನ್ನು ಕಾರ್ಯವ್ಯಾಪ್ತಿಯ ಕಾರ್ಮಿಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಸಲಾಗುತ್ತದೆ. |

| | | |
|---|---|---|
| ಇ) | ಕಟ್ಟಡ ಕಾರ್ಮಿಕರ ಹಿತದೃಷ್ಟಿಯಿಂದ ಆರ್.ಪಿ.ಎಲ್ ತರಬೇತಿ ಟೆಂಡರ್ ಹಾಗೂ ಪ್ರಿವೆಂಟಿವ್ ಹೆಲ್ತ್ ಕೇರ್ ಚೆಕ್ ಅಪ್ ಯೋಜನೆಯ ಟೆಂಡರ್‌ಗಳ ಮರು ಪರಿಶೀಲನೆಗೆ ಸರ್ಕಾರ ಈ ಕೂಡಲೇ ಮುಂದಾಗುವುದೇ? | ಮಂಡಳಿಯ ವತಿಯಿಂದ ನೋಂದಾಯಿತ ಕಾರ್ಮಿಕರ ವೃತ್ತಿ ಕೌಶಲ್ಯಗಾಗಿ ಆರ್.ಪಿ.ಎಲ್ ತರಬೇತಿ ಯೋಜನೆಯನ್ನು ರೂಪಿಸಲಾಗಿರುತ್ತದೆ. ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ವೈದ್ಯಕೀಯ ಸೇವೆ ಒದಗಿಸುವ ಹಿತದೃಷ್ಠಿಯಲ್ಲಿ ಪ್ರಿವೆಂಟಿವ್ ಹೆಲ್ತ್ ಕೇರ್ ಚೆಕ್ ಅಪ್ ಯೋಜನೆಯನ್ನು ರೂಪಿಸಲಾಗಿರುತ್ತದೆ. ಕ್ಷೇತ್ರಮಟ್ಟದಲ್ಲಿ ಈ ಯೋಜನೆಗಳ ಅನುಷ್ಠಾನವನ್ನು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಮತ್ತು ನಿರೀಕ್ಷಕರು ಮೇಲ್ವಿಚಾರಣೆ ಮಾಡುತ್ತಿರುತ್ತಾರೆ. ಅಲ್ಲದೇ, ಈ ಬಗ್ಗೆ ದೂರುಗಳು ಬಂದಾಗ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. |

**ಕಾಇ 46 ಎಲ್ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**